ಈ) ನಷ್ಟಕ್ಕೆ ಕಾರಣಕರ್ತರಾದ ಅಧಿಕಾರಿಗಳ ಮೇಲೆ ಇದುವರೆಗೆ ಯಾವುದಾದರೂ ಕ್ರಮ ಜರುಗಿಸಲಾಗಿದೆಯೇ ? ಹಾಗಿಲ್ಲದಿದ್ದಲ್ಲಿ ಯಾರು ನಷ್ಟಕ್ಕೆ ಕಾರಣಕರ್ತರು ಎಂಬುದನ್ನು ಕಂಡುಹಿಡಿದು ಅವರ ಮೇಲೆ ಕ್ರಮ ಜರುಗಿಸಲಾಗುವುದೇ ?

ಶ್ರೀ ಜೆ. ಎಚ್. ಪಟೇಲ್ (ಭಾರಿ ಹಾಗೂ ಮಧ್ಯಮ ಕೈಗಾರಿಕಾ ಮಂತ್ರಿಗಳು).—

ಅ) ಈ ಕಂಪನಿಯಲ್ಲಿ ತೊಡಗಿಸಿರುವ ಬಂಡವಾಳವು ರೂ. ೪, ೭೧, ೭೬, ೨೫೧–೦೦ ಆಗಿರುತ್ತದೆ. ಈ ಕಂಪನಿಯು ನಷ್ಟದಲ್ಲಿ ನಡೆಯುತ್ತಿದೆ.

ಆ) ೧೯೮೩–೮೪ ರಲ್ಲಿ ನಷ್ಟ ರೂ. ೫೬, ೬೭, ೫೧೧–೦೦, ೧೯೮೪–೮೫ ರಲ್ಲಿ ಲಾಭ ರೂ. ೦೭, ೬೬, ೬೯೧–೦೦, ೧೯೮೫–೮೬ ರಲ್ಲಿ ಲೆಕ್ಕ ಪರಿಶೋಧನೆ ಮಾಡಿಲ್ಲ. ನಷ್ಟಕ್ಕೆ ಕಾರಣ ಸಾಮರ್ಥ್ಯವನ್ನು ಸರಿಯಾಗಿ ಉಪಯೋಗಿಸಿಕೊಳ್ಳದಿರುವುದು.

ಇ) ಕರ್ನಾಟಕ ಸರ್ಕಾರ ಐ.ಡಿ.ಬಿ.ಐ. ಮತ್ತು ಬ್ಯಾಂಕ್ ಆಫ್ ಬರೋಡದ ಆರ್ಥಿಕ ಸಹಾಯದಿಂದ ಕಂಪನಿಯನ್ನು ಪುನಸ್ಸಜ್ಜೀಕರಣಗೊಳ್ಳುತ್ತದೆ. ಸಮಗ್ರ ಪರಿಹಾರದ ಅಂಗವಾಗಿ ಭಾಗವಹಿಸಿದ ಎಲ್ಲಾ ಏಜನ್ಸಿಗಳು ಒಪ್ಪಿಕೊಂಡ ಪ್ರಕಾರ ರಾಜ್ಯ ಸರ್ಕಾರವು ಈ ಕಂಪನಿಗೆ ನೀಡಿರುವ ಸಾಲವನ್ನು ಈಕ್ವಿಟಿಯಾಗಿ ಪರಿವರ್ತಿಸಲಾಗುತ್ತದೆ.

ಈ) ಈ ಕಂಪನಿಯು ನಷ್ಟಕ್ಕೆ ಕಾರಣವೇನೆಂದು ಕಂಪನಿಯು ಯಾವುದೇ ಅಧಿಕಾರಿಗಳನ್ನು ಆರೋಪಿಸಲು ಸಾಧ್ಯವಿಲ್ಲ.

ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಬಿಡಿಭಾಗಗಳನ್ನು ಖರೀದಿಸಿದ ಬಗ್ಗೆ

೧೯೪೨. ಶ್ರೀ ಬಿ. ಎ. ಉಮರಬ್ಬ (ವಿಟ್ಲ).— ಮಾನ್ಯ ಸಾರಿಗೆ ಹಾಗೂ ವಸತಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ೧೯೮೫ರ ಫೆಬ್ರವರಿ ೧ ರಿಂದ ಜನವರಿ ೩೧, ೧೯೮೬ರ ವರೆಗೆ ಬಿಡಿ ಭಾಗಗಳಿಗಾಗಿ ಖರ್ಚು ಮಾಡಿದ ಹಣ ಎಷ್ಟು ?

ಆ) ಬಿಡಿ ಭಾಗಗಳನ್ನು ಈಗ ಯಾವ ವಿಧಾನದಲ್ಲಿ ಖರೀದಿ ಮಾಡಲಾಗುತ್ತಿದೆ ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಹಾಗೂ ವಸತಿ ರಾಜ್ಯ ಮಂತ್ರಿಗಳು).—

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ೧–೨–೧೯೮೫ ರಿಂದ ೩೧–೧–೧೯೮೬ರ ಅವಧಿಗೆ ಬಿಡಿ ಭಾಗಗಳಿಗಾಗಿ ೧೨.೭೨ ಕೋಟಿ ರೂ. ಗಳನ್ನು ಖರ್ಚು ಮಾಡಿದೆ.

ಆ) ಬಿಡಿ ಭಾಗಗಳನ್ನು ವಾಹನ ತಯಾರಕರು, ಕ್ರಯ ಒಪ್ಪಂದದ ಆಧಾರದ ಮೇಲೆ ಸರಬರಾಜು ಮಾಡುವರು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಅನುಷಂಗಿಕ ಸಂಸ್ಥೆಗಳು ಮತ್ತು ಕರ್ನಾಟಕ ರಾಜ್ಯದ ಸಣ್ಣ ಉದ್ದಿಮೆ ಸಂಸ್ಥೆ ಇವರುಗಳಿಂದ, ವಾಹನ ತಯಾರಕರ ಬೆಲೆ ಪಟ್ಟಿ ಮತ್ತು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ನಿಗಮಗಳ ಒಕ್ಕೂಟದ ಸ್ಥಾಯಿ ಸಮಿತಿಯವರು ನಿಗದಿಪಡಿಸಿದ ಕ್ರಯ ಒಪ್ಪಂದದ ಆಧಾರದ ಮೇಲೆ ಖರೀದಿಸಲಾಗುತ್ತದೆ.

ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿನ ನಷ್ಟದ ಬಗ್ಗೆ

೧೯೪೦. ಶ್ರೀ ಬಿ. ಎ. ಉಮರಬ್ಬ (ವಿಟ್ಲ).— ಮಾನ್ಯ ಸಾರಿಗೆ ಹಾಗೂ ವಸತಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಸ್ಥಾಪಿಸಿಗೊಂಡಾಗಿನಿಂದ ಇಲ್ಲಿಯವರೆಗೆ ಆಗಿರುವ ಒಟ್ಟು ನಷ್ಟವೆಷ್ಟು ?

ಆ) ೧೯೮೩–೮೪, ೧೯೮೪–೮೫, ೧೯೮೫ರ ಜನವರಿ ೩೧ರಲ್ಲಿ ಆಗಿರುವ ನಷ್ಟ ಎಷ್ಟು ? (ವರ್ಷಂಪ್ರತಿ ವಿವರ)

ಇ) ಈ ನಷ್ಟ ತುಂಬಲು ಸಾರಿಗೆ ಸಂಸ್ಥೆ ತೆಗೆದುಕೊಂಡಿರುವ ಮಾರ್ಗೋಪಾಯಗಳೇನು ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಹಾಗೂ ವಸತಿ ರಾಜ್ಯ ಮಂತ್ರಿಗಳು).—

ಅ) ೩೧-೩-೧೯೮೫ರ ವೇಳೆಗೆ ೭೬ ೯೩ ಕೋಟಿ ರೂ.ಗಳು,

ಆ) ೧೯೮೩-೮೪ ೧೫.೭೪ ಕೋಟಿ ರೂ.ಗಳು. ೧೯೮೪-೮೫ ೨೨.೪೮ ಕೋಟಿ ರೂ.ಗಳು, ೧೯೮೫-೮೬ ೧೧.೮೫ ಕೋಟಿ ರೂ.ಗಳು (೩೧-೧೨-೧೯೮೬ರವರೆಗೆ)

ಇ) ೧) ವಾಹನಗಳ ನಿರ್ವಹಣೆ ಮತ್ತು ದುರಸ್ತಿ ಕಾರ್ಯವನ್ನು ಹೆಚ್ಚು ಸುಧಾರಿಸುವ ಮೂಲಕ.

೨) ಸಾಧ್ಯವಾದಷ್ಟು ಮಟ್ಟಿಗೆ ವಾಹನ ಸಿಬ್ಬಂದಿ ಪ್ರಮಾಣವನ್ನು ಕಡಿಮೆಮಾಡಿ ಸಿಬ್ಬಂದಿ ಹಾಗೂ ವಾಹನಗಳ ಉಪಯುಕ್ತತೆಯನ್ನು ಹೆಚ್ಚಿಸುವುದರ ಮೂಲಕ.

೩) ಟೈರುಗಳು ಇಂಧನ, ಬಿಡಿ ಭಾಗಗಳ ವೆಚ್ಚವನ್ನು ನಿಯಮಿತ ಪ್ರಮಾಣದಲ್ಲಿ ಉಪಯೋಗಿಸಿ ತನ್ಮೂಲಕ ವೆಚ್ಚವನ್ನು ಕಡಿಮೆ ಮಾಡುವುದು.

೪) ಇಂಧನ ಬಳಕೆಯ ಪ್ರಮಾಣ ಉತ್ತಮಪಡಿಸುವುದು.

೫) ಪ್ರೋತ್ಸಾಹ ಧನ ನೀಡುವುದರ ಮೂಲಕ ಆದಾಯವನ್ನು ಹೆಚ್ಚಿಸುವುದು.

೬) ವಾಹನಗಳ ತನಿಖೆ ಹೆಚ್ಚಿಸುವುದು.

ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಖರೀದಿಸಿರುವ ಟೈರು ಮತ್ತು ಟ್ಯೂಬ್‌ಗಳ ಬಗ್ಗೆ

೧೯೪೧. ಶ್ರೀ ಬಿ. ಎ. ಉಪಾರಬ್ಬಿ (ವಿಟ್ಲ).— ಮಾನ್ಯ ಸಾರಿಗೆ ಮತ್ತು ವಸತಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ಪ್ರತಿ ಒಂದು ವರ್ಷಕ್ಕೆ ಟೈರು ಮತ್ತು ಟ್ಯೂಬ್‌ಗಳಿಗಾಗಿ ಬೇಕಾಗುವ ಹಣ ಎಷ್ಟು ?

ಆ) ಈಗ ಟೈರು ಟ್ಯೂಬ್‌ಗಳನ್ನು ಯಾವ ವಿಧದಲ್ಲಿ ಖರೀದಿ ಮಾಡಲಾಗುತ್ತಿದೆ ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಹಾಗೂ ವಸತಿ ರಾಜ್ಯ ಮಂತ್ರಿಗಳು).—

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ೧೯೮೫-೮೬ನೇ ಸಾಲಿನಲ್ಲಿ ಹೊಸ ಟೈರು ಮತ್ತು ಟ್ಯೂಬುಗಳನ್ನು ಕೊಳ್ಳಲು ೧೮.೮೧ ಕೋಟಿ ರೂ.ಗಳನ್ನು ಖರ್ಚು ಮಾಡಿದೆ.

ಆ) ತ್ರೈಮಾಸಿಕ ಟೆಂಡರ್ ಆಧಾರದ ಮೇಲೆ ಟೈರು, ಟ್ಯೂಬು ಮತ್ತು ಫ್ಲಾಪ್‌ಗಳನ್ನು ತಯಾರಕರಿಂದ ಖರೀದಿಸಲಾಗುತ್ತಿದೆ.

ಹರಿಜನ ಸೇವಾ ಸಂಘಕ್ಕೆ ನಿವೇಶನಗಳನ್ನು ಹಂಚಿಕೆ ಮಾಡುವ ಬಗ್ಗೆ

೧೪೭೬. ಶ್ರೀ ಸಿ. ಕಣ್ಣನ್ (ಭಾರತೀನಗರ).—ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಅಕ್ಕಿತಿಮ್ಮನಹಳ್ಳಿಯ ಸರ್ವೆ ನಂ. ೭೧/೧ ೭೨/೧ ೪೨/೨ ಮತ್ತು ೪೩/೧ರಲ್ಲಿ ೧೪೯ ನಿವೇಶನಗಳನ್ನು ಮಾಡಿ ಹರಿಜನ ಸೇವಾ ಸಂಘದ ಮೂಲಕ ಗುಡಿಸಲು ನಿವಾಸಿಗಳಿಗೆ ಹಂಚಲು ಬಡಾವಣೆಯನ್ನು ಯೋಜಿಸಿದ್ದು ನಿಜವಷ್ಟೆ?

ಆ) ಸರ್ವೆ ನಂ. ೭೨/೧, ೪೨/೨ ಮತ್ತು ೪೩/೧ರಲ್ಲಿ ಕೋರ್ಟಿನ ತಡೆಯಾಜ್ಞೆಯಿದ್ದುದರಿಂದ ಪ್ರಾಧಿಕಾರದ ನಿರ್ಣಯದ ಸಂಖ್ಯೆ ೪೨೫ ದಿನಾ ೧೬-೧೨-೮೫ರ ಪ್ರಕಾರ ಕೇವಲ ೩೮ ನಿವೇಶನಗಳನ್ನು ಹಂಚಲಾಗಿರುವುದು ಸಹ ನಿಜವಷ್ಟೆ ?

ಇ) ಸರ್ವೆ ನಂ. ೪೨/೨ ಮತ್ತು ೪೩/೧ಕ್ಕೆ ೧೯೮೪ರಲ್ಲೂ ಮತ್ತು ಸರ್ವೆ ನಂ. ೭೨/೧ಕ್ಕೆ ಮೇ, ೧೯೮೫ರಲ್ಲೂ ಕೋರ್ಟಿನ ತಡೆಯಾಜ್ಞೆಯೂ ತೆರವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಾದರೆ ಉಳಿದ ೧೫೦ ನಿವೇಶನಗಳನ್ನು ಸಂಘಕ್ಕೆ ಬಿಡುಗಡೆ ಮಾಡಲು ವಿಳಂಬವಾಗಲು ಕಾರಣಗಳೇನು ?

ಉ) ಸರ್ವೆ ಸಂಖ್ಯೆ ೪೨/೨ ಮತ್ತು ೪೩/೧ರಲ್ಲಿ ಅನಧಿಕೃತ ನಿರ್ಮಾಣಗಳಾಗಿವೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಮತ್ತು ಒಬ್ಬ ನಗರಸಭಾ ಸದಸ್ಯರು ಈ ಜಾಗವನ್ನು ಹಳೆಯ ಮಾಲೀಕರಿಗೆ ಉಳಿಸಿಕೊಡಲು ಉತ್ಸುಕರಾಗಿದ್ದಾರೆಂಬ ವಿಷಯವು ತಿಳಿದು ಬಂದಿದೆಯೇ ?